# ಯಶೋದಾ ಮಾಯಿ

## 'ವೈಷ್ಣವ ಮೇರಿ'

ಸಂಗ್ರಹ: **ಸ್ವರ್ಣಗೌರಿ**



ಸ್ವಾಮಿ ವಿವೇಕಾನಂದರ ಒಡನಾಟದಿಂದ ಪವಿತ್ರವಾದ ಒಂದು ಪ್ರಮುಖ ಸ್ಥಳ ಗಾಜಿಪುರ. ಸ್ವಾಮೀಜಿ ಸಂತ ಪವಹಾರಿ ಬಾಬಾರವರನ್ನು ಭೇಟಿ ಮಾಡಿದ್ದು ಹಾಗೂ ಶ್ರೀರಾಮಕೃಷ್ಣರ ದರ್ಶನವನ್ನು ಪಡೆದುದ್ದು ಈ ಸ್ಥಳದಲ್ಲೇ. ಗಾಜಿಪುರದ ಅಫೀಮು ತಯಾರಿಸುವ ಕಾರ್ಖಾನೆಯಲ್ಲಿ ಅತ್ಯಂತ ಮುಖ್ಯವಾದ ಸ್ಥಾನವನ್ನು ಅಲಂಕರಿಸಿದ್ದರು ರಾಯ್ ಬಹದ್ದೂರ್ ಗಗನ್‌ಚಂದ್ರ ರಾಯ್. ಸುಸಂಸ್ಕೃತ, ಉದಾರ ಹೃದಯದ ಗಗನ್‌ಬಾಬುಗಳು ತನ್ನ ಸ್ನೇಹಿತ ಸತೀಶ್ ಮುಖ್ಯೋಪಾಧ್ಯಾಯನ ಮನೆಯಲ್ಲಿ ತಂಗಿದ್ದ ಸ್ವಾಮಿ ವಿವೇಕಾನಂದರ ಪ್ರೀತಿಯನ್ನು ಗಳಿಸಿದ್ದರು. ಸ್ವಾಮೀಜಿಯವರ ಕೃಪಾದೃಷ್ಟಿ ಗಗನ್ ರಾಯರ ಒಂಬತ್ತು ವರ್ಷದ ಮಗಳ ಮೇಲೆ ಹರಿಯಿತು. ಅತ್ಯಂತ ರೂಪವತಿಯಾದ, ಚುರುಕು ಕಣ್ಣುಗಳುಳ್ಳ ಮೋನಿಕಾಳ ಬಗ್ಗೆ ಬಹಳ ಹೆಮ್ಮೆಯಿದ್ದ ತಂದೆ ಗಗನ್‌ಬಾಬು ಸ್ವಾಮೀಜಿಗೆ ಮಗಳನ್ನು ಪರಿಚಯಿಸುತ್ತಾ ಅವಳನ್ನು ಆಶೀರ್ವದಿಸಬೇಕೆಂದು ಪ್ರಾರ್ಥಿಸಿದರು. ''ನಾನು ಅವಳನ್ನು ಬಹಳ ಹಿಂದೆಯೇ ಆಶೀರ್ವದಿಸಿದ್ದೇನೆ. ಈಗ ಅವಳನ್ನು ಜಗನ್ಮಾತೆಯೆಂದು ಪೂಜಿಸಲು ಇಚ್ಛೆಯಾಗುತ್ತಿದೆ'' ಎಂಬ ಉತ್ತರವನ್ನು ಸ್ವಾಮೀಜಿಯವರ ಶ್ರೀಮುಖದಿಂದ ಕೇಳಿದ ಗಗನ್‌ಬಾಬುಗಳ ಆನಂದಕ್ಕೆ ಪಾರವೇ ಇಲ್ಲದಾಯಿತು. ಮಾರನೇ ದಿನ ಅತ್ಯಂತ ಸಡಗರದಿಂದ ಪೂಜೆಗಾಗಿ ತಯಾರಿ ಆರಂಭವಾಯಿತು. ಶುಭಮುಹೂರ್ತದಲ್ಲಿ ಸ್ವಾಮೀಜಿ ಆ ಬಾಲಕಿಯನ್ನು ಕುಳ್ಳಿರಿಸಿ, ಜಗನ್ಮಾತೆಯೆಂದು ಪೂಜಿಸಿದರು. ಪೂಜೆಯ ನಂತರ ಸಮಾಧಿಸ್ಥರಾದರು. ಬಾಹ್ಯಜ್ಞಾನ ಉದಿಸುತ್ತಲೇ ಸ್ವಾಮೀಜಿ ಅಸ್ಪಷ್ಟ ಧ್ವನಿಯಲ್ಲಿ ಮೆಲ್ಲಗೆ ಹೀಗೆ ಹೇಳುತ್ತಿರುವುದು ಗಗನ್ ಬಾಬುಗಳ ಕಿವಿಗೆ ಬಿದ್ದಿತು: ''ಈ ಬಾಲಕಿ ಸಾಧಾರಣ ವ್ಯಕ್ತಿಯಲ್ಲ. ಹಿಂದಿನ ಜನ್ಮದ ಅನೇಕ ಸತ್‌ಸಂಸ್ಕಾರಗಳಿಂದ ಜನಿಸಿದ್ದಾಳೆ...''

ಜ್ಞಾನೇಂದ್ರನಾಥ್ ಚಕ್ರವರ್ತಿಯ ಕೈಹಿಡಿದ ಮೋನಿಕಾ ರಾಯ್ ಕೇವಲ ೧೨ ವರ್ಷಕ್ಕೆ ಗೃಹಸ್ಥ ಜೀವನಕ್ಕೆ ಕಾಲಿಟ್ಟಳು. ಆಧ್ಯಾತ್ಮಿಕ ಪ್ರವೃತ್ತಿಯುಳ್ಳ ಜ್ಞಾನೇಂದ್ರನಿಗೆ ಥಿಯಾಸಫಿಯಲ್ಲಿ ಬಹು ಆಸಕ್ತಿ. ಅವನು ಸುಪ್ರಸಿದ್ಧ ಶಿಕ್ಷಣ ಶಾಸ್ತ್ರಜ್ಞನೂ ಲಕ್ನೋ ವಿಶ್ವವಿದ್ಯಾನಿಲಯದ ಪ್ರಥಮ ಉಪಾಧ್ಯಕ್ಷನೂ ಆಗಿದ್ದನು. ಇಷ್ಟಲ್ಲದೆ ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸುವ ಗೌರವವೂ ಸಂದಿತ್ತು. ಸ್ವಾಮೀಜಿಯವರ ಅಮೋಘವಾದ ಭಾಷಣಗಳ ವಿವರಣೆ ಹೊತ್ತ ಪತಿಯ ಪತ್ರಗಳಿಂದ ಸ್ವಾಮಿ ವಿವೇಕಾನಂದರ ಬಗ್ಗೆ ಮತ್ತೊಮ್ಮೆ ತಿಳಿಯುವಂತಾಯಿತು ಮೋನಿಕಾಳಿಗೆ.

ಕಾಲಾನುಕ್ರಮದಲ್ಲಿ ಈ ದಂಪತಿಗಳಿಗೆ ನಾಲ್ವರು ಮಕ್ಕಳಾದರು. ಒಮ್ಮೆ ಪ್ಯಾರಿಸ್ಸಿನ ಒಂದು ಪ್ರದರ್ಶನಕ್ಕೆ (೧೯೦೧ ಅಥವಾ ೧೯೦೨) ಇಟೆಲಿ ಮಾರ್ಗವಾಗಿ ಯೂರೋಪ್ ದೇಶಕ್ಕೆ ಹೋದ ಮೋನಿಕಾ, ರೋಮಿನ ಸುಪ್ರಸಿದ್ಧ ಸಂತ ಪೀಟರ್ ಚರ್ಚಿಗೆ ಭೇಟಿಯಿತ್ತಳು. ಮೊದಲೇ ರೂಪವತಿಯ ಗುಂಪಿಗೆ ಸೇರಿಸಬಹುದಾದ ಮೋನಿಕಾಳ ಸೌಂದರ್ಯ, ಆ ದಿನ ಬೆಳ್ಳಿಯ ನಕ್ಷತ್ರಗಳ ಅಂಚುಳ್ಳ ನೀಲಿ ಸೀರೆಯಲ್ಲಿ ಮತ್ತಷ್ಟು ವರ್ಧಿಸಿತ್ತು. ಈ ಕಪ್ಪಾದ, ದೊಡ್ಡ ಬಟ್ಟಲುಗಣ್ಣಿನ ಚೆಲುವೆಯನ್ನು ನೋಡಿದ ಕೆಲವು ಮಂದಿ ಇಟಲಿಯ ರೈತರು ಈಕೆಯನ್ನು ಕನ್ಯೆ ಮೇರಿಯ ಅವತಾರವೆಂದು ತಿಳಿದರು. ಎಲ್ಲರೂ ಆಕೆಯನ್ನು ಸುತ್ತುವರಿದರು. ಆಕೆ ಉಟ್ಟಿದ್ದ ಸೀರೆಯ ಸೆರಗಿನಿಂದ ಕೆಲವು ತುಂಡುಗಳನ್ನು ಕತ್ತರಿಸಿಕೊಂಡರು. ಅವಳಿಗೆ ಜನರ ನೂಕುನುಗ್ಗಲಿನಿಂದ ಹೊರಬರು

ವುದೇ ಒಂದು ಸಾಹಸವಾಯಿತು. ಮತ್ತೆಂದೂ ಆ ಸೀರೆಯನ್ನು ಉಡಬಾರದೆಂದು ಎಚ್ಚರಿಸುತ್ತಾ ಆ ಜನಜಂಗುಳಿಯಿಂದ ಹೊರ ಕರೆತಂದು ಗಾಡಿಯಲ್ಲಿ ಕೂರಿಸಿದರು ಜೊತೆಗಾರರು. ಚಿನ್ನಾಭರಣಗಳಿಂದ ಸಾಲಂಕೃತಳಾಗಿ ಪ್ರದರ್ಶನಕ್ಕೆ ಬಂದ ಮೋನಿಕಾಳನ್ನು ಅಲ್ಲಿನ ಜನರು ಮಡಗಾಸ್ಕರ್‌ನ ರಾಣಿಯೆಂದೇ ತಿಳಿದರು.

ಶ್ರೀಮಂತಿಕೆ ಮತ್ತು ಮೋಹಕ ರೂಪಿನ ಬಲೆಗೆ ಸಿಲುಕಿದ ಮೋನಿಕಾ ಕ್ರಮೇಣ ಕುಡಿತ, ಧೂಮಪಾನಗಳ ಚಟಕ್ಕೆ ಸಿಲುಕಿದಳು. ಆತ್ಮೀಯ ಆತಿಥೇಯಳೆಂದೇ ಪ್ರಸಿದ್ಧಳಾಗಿದ್ದ ಅವಳ ಬಾಳು ಈಗ ಅಸ್ತವ್ಯಸ್ತವಾಯಿತು. ಆದರೆ ಸ್ವಾಮಿ ವಿವೇಕಾನಂದರ ಆಶೀರ್ವಾದವು ವ್ಯರ್ಥವಾಗಲಿಲ್ಲ. ಒಂದು ಸುದಿನದಂದು ಅವಳಲ್ಲಿದ್ದ ದೈವತ್ವವು ಇದ್ದಕಿದ್ದಂತೆ ವ್ಯಕ್ತವಾಗತೊಡಗಿತು. ಅವಳಿಗೆ ಅನೇಕ ದಿವ್ಯಾನುಭವಗಳು ಆಗತೊಡಗಿದವು. ಆಧ್ಯಾತ್ಮಿಕ ಜೀವನದಲ್ಲಿ ಒಲವು ಮೂಡಿದ ಮೋನಿಕಾ ಗೌಡೀಯ ವೈಷ್ಣವ ಪದ್ಧತಿಗೆ ಅನುಸಾರವಾಗಿ ಸಂನ್ಯಾಸ ತೆಗೆದುಕೊಳ್ಳಲು ನಿಶ್ಚಯಿಸಿದಳು. '**ಯಶೋದಾ ಮಯಿ**' ಎಂಬುದು ಅವಳ ಸಂನ್ಯಾಸ ನಾಮಧೇಯವಾಯಿತು. ಬ್ರಿಟಿಷ್ ಆಧ್ಯಾತ್ಮಿಕ ಸಾಧಕನಾಗಿದ್ದ ರೊನಾಲ್ಡ್ ಹೆನ್ರಿ ನಿಕ್ಸನ್‌ನನ್ನು ಲಕ್ನೋ ವಿಶ್ವವಿದ್ಯಾನಿಲಯಕ್ಕೆ ಆಮಂತ್ರಿಸಿದ್ದೇ ಜ್ಞಾನೇಂದ್ರ. ಕಾಲಕ್ರಮೇಣ ನಿಕ್ಸನ್ ಯಶೋದಾ ಮಯಿಯನ್ನು ತನ್ನ ಆಧ್ಯಾತ್ಮಿಕ ಗುರುವೆಂದು ಸ್ವೀಕರಿಸಿದನು. ಮುಂದೆ ಈ ಗುರುವಿನಿಂದ ಸಂನ್ಯಾಸದೀಕ್ಷೆ ಪಡೆದು 'ಕೃಷ್ಣಪ್ರೇಮ' ಎಂಬ ಅನ್ವರ್ಥನಾಮವನ್ನು ಪಡೆದನು. ಆಲ್ಮೋರಾದ ಬಳಿ ಮಿರ್ ತೋಲಾ ಎಂಬಲ್ಲಿ ಆಶ್ರಮ ಪ್ರಾರಂಭಿಸಿದಳು ಯಶೋದಾ ಮಯಿ. ಸಂಪ್ರದಾಯ ಬದ್ಧ ವೈಷ್ಣವ ಸಾಧನಾಪಥದಲ್ಲಿ ಆಧ್ಯಾತ್ಮಿಕವಾಗಿ ಮುಂದುವರಿದು, ಐರೋಪ್ಯರಲ್ಲಿ ಮೊದಲಿಗನೆಂಬ ಹೆಗ್ಗಳಿಕೆಗೆ ಪಾತ್ರನಾದನು ಕೃಷ್ಣಪ್ರೇಮ. ಅವನು ಮುಂದೆ ಅನೇಕ ಶಿಷ್ಯರನ್ನು ಸ್ವೀಕರಿಸಿ ಉನ್ನತ ಸ್ಥಿತಿಯನ್ನು ತಲುಪಿದನು.

ಸ್ವಾಮಿ ವಿವೇಕಾನಂದರ ಈ ಮಾತುಗಳು ಯಶೋದಾ ಮಯಿಗೆ ಎಷ್ಟೊಂದು ಚೆನ್ನಾಗಿ ಅನ್ವಯಿಸುತ್ತದೆ:

''ಸ್ತ್ರೀಯರಲ್ಲಿ ಓರ್ವಳು ಬ್ರಹ್ಮಜ್ಞಾನಿಯಾದರೂ ಆಕೆಯ ವ್ಯಕ್ತಿತ್ವದ ಪ್ರಭಾವದಿಂದ ಸಾವಿರಾರು ಮಂದಿ ಸ್ತ್ರೀಯರು ಸ್ಫೂರ್ತಿ ಹೊಂದಿ ಸತ್ಯವನ್ನರಿತು ಇಡೀ ದೇಶಕ್ಕೆ ಕಲ್ಯಾಣವಾಗಿ ಸಮಾಜವೂ ಭದ್ರವಾಗುವುದು ...'' *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೮, ಪು.೨೧೭)*

''ಅವರು ರೂಪಿನಲ್ಲಿ ಲಕ್ಷ್ಮಿಯನ್ನು ಹೋಲುವರು, ಸದ್ಗುಣಗಳಲ್ಲಿ ಸರಸ್ವತಿಯನ್ನು ಹೋಲುತ್ತಾರೆ. ಅವರೇ ಜಗನ್ಮಯಿಯ ಅವತಾರ. ಅವರ ಆರಾಧನೆಯ ಮೂಲಕ ಯಾವ ಕೆಲಸದಲ್ಲಾದರೂ ಸಿದ್ಧಿಯನ್ನು ಪಡೆಯಬಹುದು... ನಮ್ಮ ದೇಶದಲ್ಲಿ ಅಂತಹ ಜಗನ್ಮಯಿಯ ಅವತಾರ ಸ್ವರೂಪ ರಾದಂಥ ಒಂದು ಸಾವಿರ ಸ್ತ್ರೀರತ್ನಗಳನ್ನು ನಾನು ಸಾಯುವುದಕ್ಕೆ ಮುಂಚೆ ಒಂದುಗೂಡಿಸಿದರೆ ಶಾಂತಿಯಿಂದ ಪ್ರಾಣ ಬಿಡುವೆನು. ಆಗ ಮಾತ್ರ ನಮ್ಮ ದೇಶದವರು ತಾವು ಆರ್ಯಸಂತಾನರೆಂದು ಹೊಗಳಿಕೊಳ್ಳಬಹುದು.'' *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೪, ಪು. ೧೮೧)*

# ಸೇವೆಯಿಂದ ಸಾರ್ಥಕತೆ

ಸಿಖ್ ಗುರು ಗೋವಿಂದ ಸಿಂಹ ಆನಂದಪುರ ಸಾಹಿಬದಲ್ಲಿ ಪ್ರವಚನವನ್ನು ಮಾಡುತ್ತಿದ್ದರು. ಅವರಿಗೆ ದಾಹವಾಯಿತು. ಅವರು ''ನನಗೆ ಪವಿತ್ರ ಕೈಗಳಿಂದ ಕುಡಿಯಲು ನೀರನ್ನು ಕೊಡಬೇಕು'' ಎಂದರು. ಒಬ್ಬ ಭಕ್ತ ನೀರಿನ ಪಾತ್ರೆಯನ್ನು ತೆಗೆದುಕೊಂಡು ಮುಂದೆ ಬಂದನು. ''ಸ್ವಾಮಿ, ನನ್ನ ಕೈಗಳು ಪವಿತ್ರವಾಗಿವೆ. ನಾನು ನನ್ನ ಕೈಗಳಿಂದ ಒಂದೇ ಒಂದು ಸಣ್ಣ ಕೆಲಸವನ್ನೂ ಮಾಡಿಲ್ಲ. ನಮ್ಮ ಮನೆಯ ಎಲ್ಲ ಕೆಲಸಗಳನ್ನೂ ನೌಕರರೇ ಮಾಡುತ್ತಾರೆ,'' ಎಂದನು. ಗುರು ಗೋವಿಂದ ಸಿಂಹರು, ''ಯಾವ ಕೈಗಳು ಒಂದು ಕೆಲಸವನ್ನೂ ಮಾಡಲಿಲ್ಲವೋ, ಯಾವತ್ತೂ ಇನ್ನೊಬ್ಬರ ಸೇವೆಯನ್ನು ಮಾಡಲಿಲ್ಲವೋ ಅವು ಹೇಗೆ ತಾನೆ ಪವಿತ್ರವಾಗಲು ಸಾಧ್ಯ?'' ಎಂದರು. ಗುರು ಆ ನೀರನ್ನು ಸ್ವೀಕರಿಸಲಿಲ್ಲ. ಇನ್ನೊಬ್ಬ ಶಿಷ್ಯನು ನೀರನ್ನು ತೆಗೆದುಕೊಂಡು ಬಂದನು. ಅದರಿಂದ ಗುರು ತನ್ನ ದಾಹವನ್ನು ತೀರಿಸಿಕೊಂಡರು.

* * * *

ರಾಮಾನುಜಂ ವಾಸಿಸುತ್ತಿದ್ದುದು ಚೆನ್ನೈಯಲ್ಲಿ. ಅವನು ತನ್ನ ಮಗನಿಗೆ ಒಂದಿಷ್ಟು ಹಣವನ್ನು ಕೊಟ್ಟು, ಅಂಗಡಿಯಿಂದ ಹಣ್ಣನ್ನು ತರುವಂತೆ ಹೇಳಿದನು. ಸ್ವಲ್ಪ ಹೊತ್ತಾದ ಮೇಲೆ ಮಗ ಬರಿಗೈಯಲ್ಲಿ ಮರಳಿದನು. ತಂದೆ ಕೇಳಿದ, ''ಏಕೆ ಹಣ್ಣು ತಂದಿಲ್ಲ?'' ಮಗ ಹೇಳಿದ, ''ಅಪ್ಪ ನಾನು ಹಣ್ಣನ್ನು ತರಲಿಲ್ಲ. ಆದರೆ ನಿಮಗಾಗಿ ಅಮರಫಲವನ್ನು ತಂದಿದ್ದೇನೆ. ''ಅಮರಫಲ! ಹಾಗಂದರೇನು?'' ತಂದೆ ಕೇಳಿದನು.

ಮಗ ಹೇಳಿದ, ''ಅಪ್ಪ, ನಾನು ಹಣ್ಣು ತರಲು ಅಂಗಡಿಯ ಹತ್ತಿರ ಹೋಗಿದ್ದೆನು. ಅಲ್ಲಿ ಒಬ್ಬ ವೃದ್ಧ ಹಸಿವೆಯಿಂದ ಒದ್ದಾಡುತ್ತಿದ್ದುದು ಕಾಣಿಸಿತು. ಅವನಿಗೆ ನೀವು ಕೊಟ್ಟ ಹಣದಿಂದ ಊಟವನ್ನು ಒದಗಿಸಿದೆನು. ಹಸಿದ ವ್ಯಕ್ತಿಗೆ ಅನ್ನವನ್ನು ಒದಗಿಸಿ ಅವನ ಆಶೀರ್ವಾದವನ್ನು ಪಡೆಯುವುದು ಅಮರಫಲವಲ್ಲದೆ ಇನ್ನೇನು?''

ರಾಮಾನುಜಂ ತನ್ನ ಮಗನ ಮಾತಗಳನ್ನು ಕೇಳಿ ಸಂಪ್ರೀತನಾದನು. ಈ ಬಾಲಕನೇ ಮುಂದೆ ಶ್ರೇಷ್ಠ ಸಂತ ರಂಗದಾಸನಾದನು.

*(ಸಂಗ್ರಹ: ಮಾತಾ ತ್ಯಾಗಮಯೀ)*